1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017 &
S.C.53/2019

ದಿಃ 08.04.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ಚಂದ್ರಶೇಖರ್ |
| ತಂದೆಯ ಹೆಸರು | ಃ | ಪುಟ್ಟಸ್ವಾಮಾಚಾರ್ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಸರ್ಕಾರಿ ನೌಕರಿ |
| ವಾಸಸ್ಥಳ | ಃ | ದೇವಮಾಚನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ನವೀನ್ ಕುಮಾರ್ ನನ್ನ ಮಗ. ಚಾಸಾ.6 ನನ್ನ ಮತ್ತೊಬ್ಬ ಮಗ. ಚಾಸಾ.11 ನನ್ನ ಪತ್ನಿ. ಚಾಸಾ.13 ನನ್ನ ಮಗಳು. ಚಾಸಾ.4, 5 ಮತ್ತು 7ರವರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತಿಲ್ಲ. ಅವರನ್ನು ಈ ಹಿಂದೆ ಎಂದೂ ನೋಡಿಲ್ಲ. ನನ್ನ ಮಗ ನವೀನ್ ಕುಮಾರ್ 2017ರಲ್ಲಿ ಮೃತಪಟ್ಟಿರುತ್ತಾನೆ. ಆತ ಮನೆಯ ಹಿಂದೆ ಮೈದಾನದಲ್ಲಿ ಆಟವಾಡುತ್ತಿದ್ದಾಗ ಯಾರೋ ದ್ವಿಚಕ್ರ ವಾಹನದಲ್ಲಿ ಬಂದು ಹಲ್ಲೆ ಮಾಡಿ ಹತ್ಯೆ ಮಾಡಿರುತ್ತಾರೆ. ನನ್ನ ಮಗ ಚಾಸಾ.6

ಅವನೊಂದಿಗೆ ಆಟವಾಡುತ್ತಿದ್ದು ಆತನೇ ಬಂದು ನಮಗೆ ವಿಷಯ ತಿಳಿಸಿರುತ್ತಾನೆ. ನನ್ನ ಮಗ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ.

2. ನನ್ನ ಮಗನಿಗೆ ಯಾವ ಆಯುಧದಲ್ಲಿ ಹಲ್ಲೆ ಮಾಡಿುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗನ ಮೇಲೆ ಹಲ್ಲೆ ನಡೆದಾಗ ಸಂಜೆ ಸುಮಾರು 5.30 ಆಗಿತ್ತು. ಯಾವ ಕಾರಣಕ್ಕೆ ಹಲ್ಲೆ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ವಿಷಯವಾಗಿ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ಯಾವುದೇ ಕ್ರಮ ವಹಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನನ್ನು ಮಾಗಡಿಗೆ ಕರೆಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿದಾರರು ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು. ನಿ.ಪಿ.2ಕ್ಕೆ ಪೊಲೀಸರು ನಮ್ಮ ಮನೆಯ ಬಳಿ ಬಂದಾಗ ಮಾಡಿರುತ್ತೇನೆ. ನಾವು ದೂರು ನೀಡಿದ ಕಾರಣಕ್ಕೆ ನಿ.ಪಿ.2ಕ್ಕೆ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮದಲ್ಲಿ ಪೊಲೀಸರು

ಯಾವುದೇ ವಸ್ತು ಜಪ್ತಿ ಮಾಡಲಿಲ್ಲ. ನಿ.ಪಿ.2 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ನನಗೆ ಬೇರೆ ಯಾವುದೇ ವಿಷಯಗಳು ಈ ಪ್ರಕರಣದಲ್ಲಿ ಗೊತ್ತಿಲ್ಲ. ಪೊಲೀಸರು ಇಬ್ಬರು ಆರೋಪಿಗಳನ್ನು ಸ್ಥಳಕ್ಕೆ ಕರೆದುಕೊಂಡು ಬಂದಿದ್ದು ಅವರುಗಳು ನನಗೆ ನೆನಪಿಲ್ಲ ಮತ್ತು ಗುರುತಿಸಲು ಬರುವುದಿಲ್ಲ. ನನ್ನ ಮಗ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ನನಗೆ ಗುರುತಿಸಲು ಬರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವ ಮುನ್ನವೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಘಟನಾ ದಿನದಂದು ನನ್ನ ಮಗ ಚಾಸಾ.2 ರಿಂದ 6 ರವರ ಜೊತೆ ಮೈದಾನದಲ್ಲಿ ಆಟವಾಡುತ್ತಿದ್ದ ಎಂದು ದೂರಿನಲ್ಲಿ ಹೇಳಿದ್ದು, ಆಗ ಸಂಜೆ 6 ಗಂಟೆ ಸಮಯದಲ್ಲಿ ಚಾಸಾ.2 ಮತ್ತು 6 ರವರು ಮನೆಗೆ ಓಡಿ ಬಂದು ದ್ವಿಚಕ್ರ ವಾಹನದಲ್ಲಿ ಲಾಂಗುಗಳನ್ನು ಹಿಡಿದುಕೊಂಡು ಬಂದು ನನ್ನ ಮೃತ ಮಗನನ್ನು ಓಡಿಸಿಕೊಂಡು ಹೋಗಿ ಚಿಕ್ಕಣ್ಣನವರ ಮನೆ ಮುಂದೆ ಮಾರಣಾಂತಿಕ ಹಲ್ಲೆ ಮಾಡಿದ ಬಗ್ಗೆ ನಮಗೆ ಹೇಳಿದ್ದು,

ಅದರಂತೆ ನಾನು ಪೊಲೀಸರಿಗೆ ನಿ.ಪಿ.1ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ದೂರು ನೀಡಿದ ಮಾರನೇ ದಿನ ಪೊಲೀಸರು ಬೆಳಿಗ್ಗೆ 9.30ಕ್ಕೆ ಘಟನಾ ಸ್ಥಳಕ್ಕೆ ಬಂದಿದ್ದು ನಾನೂ ಸಹ ಸ್ಥಳದಲ್ಲಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.2ರಂತೆ ಮಹಜರ್ ಮಾಡಿದ್ದು, ಸ್ಥಳದಲ್ಲಿಯೇ ನಾನು ಸಹಿ ಮಾಡಿದೆ ಎಂದು ನೆನಪಿಲ್ಲ. ನಿ.ಪಿ.2ರ ಕಾಲದಲ್ಲಿ ಪೊಲೀಸರು ಸಾದಾ ಮಣ್ಣು, ರಕ್ತ ಹತ್ತಿದ ಮಣ್ಣು, ಬಿಳಿ ಬಣ್ಣದ ಚಪ್ಪಲಿ ಮತ್ತು ವಾಲಿಬಾಲ್‌ನ್ನು ನನ್ನ ಸಮಕ್ಷಮ ಜಪ್ತಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನೋಡಿದರೆ ನಾನು ಗುರುತಿಸಲಾರೆ. ಸದರಿ ವಸ್ತುಗಳನ್ನು ಸೀಲ್ ಮಾಡಲಾದ ಬಟ್ಟೆಯಿಂ ತೆಗೆದು ಸಾಕ್ಷಿಗೆ ತೋರಿಸಿ, ನಿರಾಕರಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ.1ರಿಂದ 4 ಎಂದು ಗುರುತಿಸಲಾಯಿತು. ಮು.ಮಾ.2ರಿಂದ 4ಗಳ ಮೇಲಿನ ಚೀಟಿಗಳಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದು, ಸದರಿ ಸಹಿಗಳನ್ನು ಮು.ಮಾ.2(ಎ)ರಿಂದ 4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೊಲೀಸರು ಠಾಣೆಯಲ್ಲಿ ಪಡೆದಿರುತ್ತಾರೆ. ಮು.ಮಾ.1ರಿಂದ 4ನ್ನು ನನ್ನ ಸಮಕ್ಷಮದಲ್ಲಿ ಜಪ್ತಿ ಮಾಡಲಾಯಿತು ಎಂದರೆ ಸರಿಯಲ್ಲ.

3. ದಿಃ18.10.2016 ರಂದು ಪೊಲೀಸರು 8 ಜನ ಆರೋಪಿಗಳನ್ನು ನಮ್ಮ ಮನೆಯ ಬಳಿಯ ಚಿದಾನಂದ ಅವರ ಜಮೀನಿನ ಬಳಿ ಮೈದಾನಕ್ಕೆ ಕರೆದುಕೊಂಡು ಬಂದಿದ್ದು ಸ್ಥಳ ಪರಿಶೀಲಿಸಿ ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಅದರಂತೆ ನಾನು ಪೊಲೀಸರಿಗೆ ಎರಡು ಹೇಳಿಕೆಗಳನ್ನು ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ.

4. ನನಗೀಗ ಓದಿ ಹೇಳಿ, ನಿ.ಪಿ.3 ಮತ್ತು 4 ಎಂದು ಗುರುತಿಸಲಾದ ದಸ್ತಾವೇಜಿನಂತೆ ಪೊಲೀಸರಿಗೆ ಹೇಳಿಕೆಗಳನ್ನು ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಗಳೇ ನನ್ನ ಮಗನನ್ನು ಹತ್ಯೆ ಮಾಡಿರುವುದಾಗಿ ತಿಳಿದಿದ್ದರೂ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ಟಿ.ಜಿ., ಮತ್ತು ಶ್ರೀ. ಎಸ್.ಹೆಚ್.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿದ್ದಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.